ಅಭಿವೃದ್ಧಿ ಪಡಿಸುವುದರ ಜೊತೆ ಜೊತೆಗೆ ತೆಗೆದುಕೊಳ್ಳಲಾಗುವುದು. ಪ್ರಸ್ತುತವಿರುವ ವಿಮಾನ ನಿಲ್ದಾಣಗಳು ಅಂದರೆ ಹುಬ್ಬಳ್ಳಿ, ಬೆಳಗಾಂ ಇತ್ಯಾದಿಗಳು ವಾಯುಸಂಚಾರಕ್ಕೆ ಸಿದ್ಧವಾಗಿ ಲಭ್ಯವಿದ್ದಾಗ್ಯೂ ಹಾರಾಟಗಳನ್ನು ಮಾಡಲಾಗುತ್ತಿಲ್ಲ. ಆದುದರಿಂದ ಈ ವಿಮಾನ ನಿಲ್ದಾಣಗಳು ಉಪಯೋಗಗೊಳ್ಳದೆ ಇರುತ್ತವೆ.

ಆದುದರಿಂದ, ಸಣ್ಣ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಹಾಗೂ ಏರ್‌ಲೈನ್ಸ್ ಸೇವೆಯನ್ನು ನೀಡುವ ಎರಡು ಪ್ರಯತ್ನಗಳನ್ನು ಒಟ್ಟಿಗೆ ಮಾಡಲು ಸರ್ಕಾರವು ಪ್ರಸ್ತಾಪಿಸಿರುತ್ತದೆ. ಈ ಪ್ರಯತ್ನವು ಸಾಧ್ಯವಾದಷ್ಟು ಖಾಸಗೀ ವಲಯದವರನ್ನು ಒಳಗೊಂಡಿರುತ್ತದೆ. ಆದುದರಿಂದ, ಇಂತಹ ಪ್ರಯತ್ನಕ್ಕೆ ಪುಷ್ಠಿ ಕೊಡಲು ಬೇಕಾಗುವ ಆಯವ್ಯಯದ ಹಂಚಿಕೆಯನ್ನು ಸೂಕ್ತ ಸಮಯದಲ್ಲಿ ಒದಗಿಸಲಾಗುವುದು.

ಹೇಮಾವತಿ D.9 ಚಾನಲ್ ಕಾಮಗಾರಿ.

1665(2288)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ತುರುವೇಕೆರೆ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುರುವೇಕರೆ ತಾಲ್ಲೂಕು ಕಸಬಾ ಹೋಬಳಿ, ದುಂಡ ಗ್ರಾಮದ ಬಳಿ ತೆಗೆದಿರುವ ಹೇಮಾವತಿ D-9 (Distributory) ಚಾನಲ್ ಕಾಮಗಾರಿಯಲ್ಲಿ ಕೆಲಸವು ಸುಮಾರು ವರ್ಷಗಳಿಂದ ಸ್ಥಗಿತಗೊಂಡಿರಲು ಕಾರಣವೇನು;

ಆ. ಸುಮಾರು ಎಂಟುನೂರು ಎಕರೆ ಜಮೀನಿನ ರೈತರಿಗೆ ಅನೇಕ ವರ್ಷದಿಂದ ತೊಂದರೆಯಾಗಿದ್ದರೂ ಸರ್ಕಾರ ಗಮನ ಹರಿಸದಿರಲು ಕಾರಣವೇನು;

ಇ. ಈ ವರ್ಷದಲ್ಲಿ ಕಾಮಗಾರಿ ಮುಗಿಸಿ ರೈತರಿಗೆ ಅನುಕೂಲ ಮಾಡಿಕೊಡಲಾಗುವುದೆ?

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಮಂತ್ರಿಗಳು):

ಅ. ಪಿ.ಆರ್.9(ಎ)ರ ಅಡಿಯಲ್ಲಿ ಬಹುತೇಕ ಎಲ್ಲಾ ಕಾಮಗಾರಿಗಳು ಮುಗಿದಿದ್ದು, ದುಂಡ ಮೈನರ್‌ನ ಅಡಿಯಲ್ಲಿ ರೈಲ್ವೇ ಸೇತುವೆಯನ್ನು ಮಾತ್ರ ಹೊರತುಪಡಿಸಿ ಉಳಿದೆಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಆರ್.ಸಿ.ಸಿ. ಬಾಕ್ಸ್ ಸೈಫನ್

ಕಾಮಗಾರಿಯನ್ನು ರೈಲ್ವೇ ಇಲಾಖೆಯಿಂದ ನಿರ್ವಹಿಸಬೇಕಾಗಿರುತ್ತದೆ.

ಆ. ವಿತರಣಾ ನಾಲೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ಸುಮಾರು 730 ಹೆ.ಪ್ರದೇಶಕ್ಕೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. ಸ:3300 ಮೀ.ನಲ್ಲಿ ಇರುವ ಕವಲು ಕಾಲುವೆಯ 1.5 ಕಿ.ಮೀ.ಗಳ ಕಾಲುವೆಯಲ್ಲಿನ ಸ:300 ಮೀ.ನಲ್ಲಿ ಅಮೃಸಂದ್ರ ಬಾಣಸಂದ್ರ ನಡುವಿನ ರೈಲ್ವೇ ಹಳಿ ಅಡ್ಡ ಬಂದಿದ್ದು, ಇಲ್ಲಿ ಆರ್.ಸಿ.ಸಿ. ಬಾಕ್ಸ್ ಸೈಫನ್ ನಿರ್ಮಾಣ ಮಾಡಬೇಕಾಗಿರುತ್ತದೆ. ಈ ಕಾಮಗಾರಿ ಪೂರ್ಣಗೊಂಡ ನಂತರ ಉಳಿಕೆ 153 ಹೆ. ಪ್ರದೇಶಕ್ಕೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು. ರೈಲ್ವೇ ಬಾಕ್ಸ್ ಸೈಫನ್ ಕಾಮಗಾರಿಗೆ ರೂ.1858 ಲಕ್ಷಗಳ ಅಂದಾಜನ್ನು ರೈಲ್ವೇ ಇಲಾಖೆಯು ತಯಾರಿಸಿದ್ದು, ಈ ಮೊತ್ತದಲ್ಲಿ ರೂ.10.00 ಲಕ್ಷಗಳನ್ನು ಜಲ ಸಂಪನ್ಮೂಲ ಇಲಾಖೆ ರೈಲ್ವೇ ಇಲಾಖೆಗೆ ಠೇವಣಿ ರೂಪದಲ್ಲಿ ಸಂದಾಯ ಮಾಡಿರುತ್ತದೆ. ಉಳಿದ ಮೊತ್ತವನ್ನು ಸಂದಾಯ ಮಾಡಿ ಕಾಮಗಾರಿಯನ್ನು ಕೂಡಲೇ ಕೈಗೊಳ್ಳುವಂತೆ ರೈಲ್ವೇ ಇಲಾಖೆಗೆ ತಿಳಿಸಲಾಗುವುದು.

ಇ. ಕಾಮಗಾರಿಯನ್ನು ಪೂರ್ಣಗೊಳಿಸಲು ರೈಲ್ವೇ ಇಲಾಖೆಗೆ ತಿಳಿಸಲಾಗುವುದು.

ತುರುವೇಕೆರೆ ನಗರದಿಂದ ತಿಪಟೂರಿಗೆ ವಿದ್ಯುತ್ ಉಗ್ರಾಣ ಬದಲಾಯಿಸಿರುವುದು.

1666(2287)

ಶ್ರೀ ಲಕ್ಷ್ಮೀನಾರಾಯಣ ಎಂ. ಡಿ.(ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ನಗರದಿಂದ ತಿಪಟೂರಿಗೆ ವಿದ್ಯುತ್ ಉಗ್ರಾಣ ಬದಲಾಯಿಸಿದ ಕಾರಣವೇನು?

ಆ) ಇದರಿಂದ 2 ತಾಲ್ಲೂಕಿನ ಜನರಿಗೆ ತೊಂದರೆಯಾದ ಪ್ರಯುಕ್ತ ಕೆ.ಪಿ.ಟಿ.ಸಿ.ಎಲ್‌ನ ಉಗ್ರಾಣವನ್ನು ತುರುವೇಕೆರೆಗೆ ಕೊಡಲು ಕ್ರಮ ಜರುಗಿಸಲಾಗುವುದೆ?

ಶ್ರೀ ವೀರ ಕುಮಾರ್ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ನಿಗಮವು ಎಲ್ಲಾ ಸಾಧಕ ಬಾಧಕಗಳನ್ನು ಪರಿಶೀಲಿಸಿದ ನಂತರವೇ, ಎಲ್ಲಾ